ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ದೊಡ್ಡಬಳ್ಳಾಪುರ
ಸಿಸಿ ನಂ 153/16
ಪಿಡಬ್ಲ್ಯೂ: 1 ಸಿಡಬ್ಲೂ: 1

| | |
|---|---|
| ಸಾಕ್ಷಿದಾರನ ಹೆಸರು | **ನಾಗರತ್ನಮ್ಮ** |
| ಗಂಡನ ಹೆಸರು | ಲಕ್ಷ್ಮಣ |
| ವಯಸ್ಸು | 57 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ ಸ್ಥಳ | ಗಂಟಿಗಾನಹಳ್ಳಿ |
| ದಿನಾಂಕ | 14-09-2021 |

<u>ಮುಂದುರೆದ ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ</u>

ಚಾಸಾ-2 ರಿಂದ 5 ರವರು ಗೊತ್ತು. ಆರೋಪಿ 1 ರಿಂದ 4 ಗೊತ್ತು. 4ನೇ ಆರೋಪಿ ಮೃತಪಟ್ಟಿರುತ್ತಾರೆ.

ದಿನಾಂಕ 09-10-2013 ರಂದು ರಾತ್ರಿ ಸುಮಾರು 08-00 ಗಂಟೆ ಸಮಯದಲ್ಲಿ ನಾನು ಚಾಸ-2 ರವರ ಮನೆಯ ಬಳಿ ಅವರೊಂದಿಗೆ ಮಾತನಾಡುತ್ತಾ ನಿಂತಿದ್ದಾಗ, 1 ರಿಂದ 4ನೇ ಆರೋಪಿತರು ಏಕಾಏಕಿ ಬಂದು ಕೈಗಳಿಂದ, ಕಾಲುಗಳಿಂದ ನನ್ನ ಮೈ ಕೈಗೆ, ಕಾಲಿಗೆ ಹೊಡೆದಿರುತ್ತಾರೆ. ಎಲ್ಲರೂ ಸೇರಿಕೊಂಡು ನನ್ನ ಸೀರೆಯನ್ನು ಹಿಡಿದು ಎಳೆದಿರುತ್ತಾರೆ. ಆರೋಪಿತರೆಲ್ಲರೂ ಸೇರಿಕೊಂಡು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿತರು ನನಗೆ ಕಾಲಿನಿಂದ ಒದ್ದಿರುತ್ತಾರೆ. 1ನೇ ಆರೋಪಿ ದೇವರಾಜು ನನ್ನ ತಲೆಕೂದಲನ್ನು ಹಿಡಿದು ಎಳೆದಾಡಿರುತ್ತಾರೆ. ನಮ್ಮ ತಂದೆಯವರು ಹಾಕಿದ್ದ ಒಂದು ಸಿವಿಲ್ ದಾವೆಯ ಸಂಬಂಧವಾಗಿ ಆರೋಪಿತರು ಗಲಾಟೆ ಮಾಡಿರುತ್ತಾರೆ. ನಾನು ಈ ಸಂಬಂಧವಾಗಿ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ. ಸದರಿ ದೂರನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಗಲಾಟೆಯಾದ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದು ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ಮಹಜರನ್ನು ಮಾಡಿರುತ್ತಾರೆ ಅಗ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಸಾಕ್ಷಿ

ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿತರು ಯಾರೆಲ್ಲಾ ನಿರ್ದಿಷ್ಟವಾಗಿ ಯಾವ ರೀತಿಯಾಗಿ ಹಲ್ಲೆ ಮಾಡಿರುತ್ತಾರೆಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. 4 ಜನ ಒಟ್ಟಾಗಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ.

ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.

ಪಾಟೀ ಸವಾಲು ಎಪಿಪಿಯವರಿಂದಃ

1ನೇ ಆರೋಪಿಯು ನನ್ನ ಕುತ್ತಿಗೆಯನ್ನು ಹಿಡಿದುಕೊಂಡು ಕೈಗಳಿಂದ ನನ್ನ ಕೆನ್ನೆಗಳಿಗೆ ಬಡಿದು ಹಲ್ಲೆ ಮಾಡಿರುತ್ತಾರೆಂದರೆ ಸರಿ. 2ನೇ ಆರೋಪಿ ಕೈಗಳಿಂದ ನನ್ನ ಬೆನ್ನಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆಂದರೆ ಸರಿ. 3ನೇ ಆರೋಪಿ ನನ್ನ ಸೀರೆಯನ್ನು ಹಿಡಿದು ಎಳೆದಾಡಿರುತ್ತಾರೆಂದರೆ ಸರಿ. 4ನೇ ಆರೋಪಿ ಕಾಲುಗಳಿಂದ ನನ್ನ ಹೊಟ್ಟೆಗೆ ಮತ್ತು ಬೆನ್ನಿಗೆ ಒದ್ದಿರುತ್ತಾರೆಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ನಾನು ನಿಪಿ-1 ರಲ್ಲಿ ಹೇಳಿರುತ್ತೇನೆಂದರೆ ಸರಿ.

ಪಾಟೀ ಸವಾಲು ಶ್ರೀ ಅರ್ ಎಂ ವಕೀಲರಿಂದಃ

ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ರಿಂದ 3ನೇ ಆರೋಪಿತರು ನನ್ನ ಸಂಬಂಧಿಕರು. ನಾನು ಗೃಹಿಣಿ. ಆರೋಪಿತರ ವಿರುದ್ದ ನಾನು ಸಿವಿಲ್ ದಾವೆಯನ್ನು ಹೂಡಿದ್ದೆನು. ನಮ್ಮ ಮೇಲೆ ಹಲ್ಲೆ ಮಾಡಿದ ಬಗ್ಗೆ ಸಿವಿಲ್ ದಾವೆಯನ್ನು ಹಾಕಿರುತ್ತೇನೆ. ಸಿವಿಲ್ ದಾವೆಯನ್ನು ನಮ್ಮ ತಂದೆಯವರು ಹೂಡಿದ್ದರು. 4ನೇ ಅರೋಪಿ ಅಂದರೆ 1ನೇ ಆರೋಪಿ ತಂದೆ ವಿರುದ್ದ ಸದರಿ ದಾವೆಯನ್ನು ಹಾಕಿರುತ್ತಾರೆ. ಸದರಿ ದಾವೆ ವಜಾ ಅಗಿರುವುದಿಲ್ಲ, ಬಾಕಿ ಇದೆ. ಮನೆ ಜಾಗದ ಮೇಲೆ ಸದರಿ ದಾವೆಯನ್ನು

ಹಾಕಿರುತ್ತೇವೆ. ನಮ್ಮ ತಂದೆ ಈಗ ಮರಣ ಹೊಂದಿರುತ್ತಾರೆ. ನಮ್ಮ ತಂದೆ 2013 ರಂದು ನಮ್ಮ ತಂದೆ ಮೃತಪಟ್ಟಿರುತ್ತಾರೆ. ನಮ್ಮ ತಂದೆಯವರು 4-5 ತಿಂಗಳ ನಂತರ ಸದರಿ ಗಲಾಟೆ ನಡೆದಿರುತ್ತದೆ.

ನಾವು ಗಂಟಿಗಾನಹಳ್ಳಿಯಲ್ಲಿ ವಾಸವಾಗಿರುತ್ತೇವೆ. ಆರೋಪಿತರೂ ಸಹ ನಮ್ಮ ಗ್ರಾಮದವರು. ಆರೋಪಿತರ ಮನೆಗೂ ನಮ್ಮ ಮನೆಗೂ ಸುಮಾರು ಕಾಲು ಕಿಲೋಮೀಟರ್ ಅಂತರವಿದೆ. ನಮ್ಮ ಎದುರು ಮನೆಯಲ್ಲಿ ರಾಮಾಂಜಿನಪ್ಪ, ಪಕ್ಕದ ಮನೆಯಲ್ಲಿ ಅಶ್ವತಪ್ಪರವರು ಇರುತ್ತದೆ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಮನೆಗಳಿವೆ. ದಿನಾಂಕ 09-10-2013 ರಂದು ಗಲಾಟೆಯಾಯಿತೆನ್ನಲಾದ ಸಮಯದಲ್ಲಿ ಮನೆಯಲ್ಲಿ ನಾನೊಬ್ಬಳೇ ಇದ್ದೆನು. ಈ ಪ್ರಕರಣದಲ್ಲಿ ಅಕ್ಕ-ಪಕ್ಕದ ಮನೆಯವರು ಯಾರೂ ಸಾಕ್ಷಿದಾರರಾಗಿರುವುದಿಲ್ಲ, ನಿಪಿ-1 ನ್ನು ನನ್ನ ಮಗಳಾದ ಮಂಜುಳಾ ಬರೆದಿರುತ್ತಾಳೆ. ಗಲಾಟೆಯಾಯಿತೆನ್ನಲಾದ ಸಮಯದಲ್ಲಿ ಗ್ರಾಮಸ್ಥರಿದ್ದರೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ.

ಘಟನೆಯಾದ ಸ್ಥಳದ ಸ್ವಲ್ಪ ದೂರದಲ್ಲಿ ಬೆಳಕಿತ್ತು, ನನ್ನ ತಂದೆ ಸಾಯುವ ಸಮಯದಲ್ಲಿ ಸಿವಿಲ್ ದಾವೆಯು ವಜಾ ಆಗಿತ್ತೆಂದರೆ ಸರಿ. ನಾನು ಯಾವುದೇ ಸಿವಿಲ್ ದಾವೆಯನ್ನು ಆರೋಪಿತರ ವಿರುದ್ಧ ಸಲ್ಲಿಸಿರುವುದಿಲ್ಲ, ಘಟನೆ ನಡೆಯಿತೆನ್ನಲಾದ ಸಮಯದಲ್ಲಿ ಸದರಿ ದಾವೆಯು ವಜಾ ಆಗಿದ್ದರಿಂದ ಆರೋಪಿತರು ಬಂದು ದಾವೆಯನ್ನು ಹಿಂಪಡೆಯುವಂತೆ ಕೇಳುವ ಪ್ರಮೇಯವೇ ಇರಲಿಲ್ಲ ಎಂದರೆ ಸಾಕ್ಷಿಯು ಸದರಿ ದಾವೆ ವಿಚಾರವಾಗಿಯೇ ಆರೋಪಿತರು ಗಲಾಟೆ ಮಾಡಿರುತ್ತಾರೆಂದು ನುಡಿಯುತ್ತಾರೆ.

ನಿಪಿ-1 ನ್ನು ನನ್ನ ಮಗಳೇ ಸ್ವತಃ ಬರೆದಿರುತ್ತಾಳೆ. ದಿನಾಂಕ 09-10-2013 ರಂದು ಆರೋಪಿತರು ಎಳೆದರೆನ್ನಲಾದ ಸೀರೆಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ಆ ದಿನ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವವರು ಯಾರೂ ಇಲ್ಲದೇ ಇರುವುದರಿಂದ ಮಾರನೇ ದಿನ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಆ ದಿನ ಘಟನೆ ನಡೆಯಿತೆನ್ನಲಾದ ಸಮಯದಲ್ಲಿ ನೀವು ನೀವೇನಾದರೂ ಕಿರುಚಾರ ಮಾಡಿದಲ್ಲಿ ಗ್ರಾಮಸ್ಥರೇನಾದರೂ ಬಂದು ಆಸ್ಪತ್ರೆಗೆ ಸೇರಿಸುವ ಪ್ರಯತ್ನವನ್ನು ಮಾಡಿದ್ದಾರಾ ಎಂದರೆ ಸಾಕ್ಷಿ ನನ್ನ

ಮಕ್ಕಳು ಇಲ್ಲದಿದ್ದುರಿಂದ ಮಾರನೇ ದಿನ ಅಸ್ಪತ್ರೆಗೆ ಹೋಗಿರುತ್ತೇನೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅಂಬರೀಶ್ ಎನ್ನುವವರು ಆ ದಿನ ಜಗಳವನ್ನು ಬಿಡಿಸಿರುತ್ತಾರೆಂದು ನುಡಿಯುತ್ತಾರೆ. ಆ ದಿನ ನೀವು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ.

ಗಂಟಿಗಾನಹಳ್ಳಿಯಿಂದ ದೊಡ್ಡಬಳ್ಳಾಪುರಕ್ಕೆ 13 ಕಿ.ಮೀ ದೂರ ಇದೆ. ರಾತ್ರಿ ಸಮಯದಲ್ಲಿ ತೂಬುಗೆರೆ ಮತ್ತು ಮೇಳೆಕೋಟೆ ಗ್ರಾಮದಲ್ಲಿ ಅಸ್ಪತ್ರೆಗಳು ತೆರೆದಿರುವುದಿಲ್ಲ. ಅಂಬರೀಶ ಗಲಾಟೆ ಬಿಡಿಸಿರುತ್ತಾನೆಂದು ನನ್ನ ಮಗಳು ನೀಡಿದ ದೂರಿನಲ್ಲಿ ಇರುವುದಿಲ್ಲ. ಗಲಾಟೆ ಅಯಿತೆಂದು ಪೊಲೀಸರಿಗೆ ಆ ದಿ ನ ದೂರವಾಣಿ ಮೂಲಕ ತಿಳಿಸಿರುವುದಿಲ್ಲ. ಮಾರನೇ ದಿನ ಬೆಳಿಗ್ಗೆ 09-30 ಗಂಟೆಗೆ ಮನೆ ಬಿಟ್ಟಿರುತ್ತೇನೆ. ನಾನು ನನ್ನ ಮಗ, ನನ್ನ ಮಗಳು ನಗರಕ್ಕೆ ಬಂದಿರುತ್ತೇವೆ. ಮೊದಲಿಗೆ ಅಸ್ಪತ್ರೆಗೆ ಹೋದೆವು. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು 30 ರಿಂದ 45 ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ 11-00 ಗಂಟೆಗೆ ಹೋಗಿರುತ್ತೇವೆ. 11-00 ಗಂಟೆಗೆ ಠಾಣೆಯಲ್ಲಿ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ನಾನು ಸಮಯವನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಹೊರರೋಗಿಯಾಗಿ ಅಸ್ಸ್ಪತ್ರೆಯಲಿಃ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ನಮ್ಮ ಕುಟುಂಬದವರಿಗೂ ಆರೋಪಿತರ ಕುಟುಂಬದವರಿಗೂ ಸುಮಾರು 30 ವರ್ಷಗಳಿಂದಲೂ ವೈಷಮ್ಯ ಇದೆ. ದೂರನ್ನು ಕೊಟ್ಟ ದಿನವೇ ಪೊಲೀಸರು ಮಧ್ಯಾಹ್ನ 12-00 ಗಂಟೆಗೆ ಸ್ಥಳಕ್ಕೆ ಬಂದಿರುತ್ತಾರೆ. ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಪೊಲೀಸರು ಮಹಜರು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಮಹಜರು ಮಾಡಿದ ಸ್ಥಳದ ಚಕ್ಕುಬಂದಿ ಹೇಳಬಲ್ಲೆ. ಪೊಲೀಸರು ಮಹಜರು ಮಾಡುವ ಸಮಯದಲ್ಲಿ ಸ್ಥಳಕ್ಕೆ ನಾನು ಹೋಗಿರಲಿಲ್ಲ. ನಾನು ಪೊಲೀಸ್ ಠಾಣೆಯಲ್ಲಿದ್ದೆ. ಪೊಲೀಸರು ಊರಿಗೆ ಹೋಗಿ ಮಹಜರು ಮಾಡಿಕೊಂಡ ಬಂದ ನಂತರ ಠಾಣೆಯಲ್ಲಿ ನಾನು ಮಹಜರಿಗೆ ಅಂದರೆ ನಿಪಿ-2 ಕ್ಕೆ ಸಹಿ

ಹಾಕಿರುತ್ತೇನೆ. ನಿಪಿ-2 ಕ್ಕೆ ನನ್ನ ಮಗ ಹರೀಶ ಸಹಿ ಹಾಕಿರುತ್ತಾನೆ. ನಿಪಿ-2 ಕ್ಕೆ ಅಶೋಕ ಎಂಬುವವರು ಕೂಡ ಸಹಿ ಹಾಕಿರುತ್ತಾರೆ. ಅವರಿಬ್ಬರನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ.

ದಿನಾಂಕ 09-10-2013 ರಂದು ರಾತ್ರಿ 08-00 ಗಂಟೆ ಸಮಯದಲ್ಲಿ ಆರೋಪಿತರು ಏಕಾಏಕಿ ನಮ್ಮ ಮನೆಗೆ ಬಂದದ್ದಾಗಲೀ, ಅವಾಚ್ಯ ಶಬ್ದದಿಂದ ಬೈದಿದ್ದಾಗಲೀ ನನ್ನ ಮೇಲೆ ಹಲ್ಲೆ ಮಾಡಿದ್ದಾಗಲೀ, ಸೀರೆಯನ್ನು ಎಳೆದದ್ದಾಗಲೀ ಸುಳ್ಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆಯು ನೀಡಿದಂತಹ ಸಿವಿಲ್ ಪ್ರಕರಣವು ವಜಾ ಆದ ಹಿನ್ನೆಲೆಯಲ್ಲಿ ಆರೋಪಿತರ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸದರಿ ಜಮೀನನ್ನು ಕಬಳಿಸಬೇಕೆಂದು ಹುನ್ನಾರ ಮಾಡಿದ್ದೀರಿ ಎಂದರೆ ಸರಿಯಲ್ಲ. ಘಟನಾ ಸಂಬಂಧ ಸಿವಿಲ್ ದಾವೆಯು ಚಾಲ್ತಿಯಲ್ಲಿದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ. ಪ್ರಕರಣಕ್ಕೆ ಸಹಾಯವಾಗಲೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇಂದರೆ ಸರಿಯಲ್ಲ. ನಾವು ಆರೋಪಿಗಳಿಗಿಂತ ಶ್ರೀಮಂತರು ಮತ್ತು ಪ್ರಭಾವಿಗಳೆಂದರೆ ಸರಿಯಲ್ಲ. ಆರೋಪಿತರು ಬಡವರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ